ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾಯೋಜನೆ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560 001,
E-mail ID: icps.kar@gmail.com Ph.No.080-22879381/82

ಸಂ:ಕೆಎಸ್ಐಸಿಪಿಎಸ್: ಕೋವಿಡ್–19/51/2020–21 ದಿನಾಂಕ:24.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್ 19 ರ ಹಿನ್ನೆಲೆಯಲ್ಲಿ ಮಕ್ಕಳ ಸುರಕ್ಷತೆ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು

ಉಲ್ಲೇಖ: ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ ಇವರ ಮನವಿ ದಿನಾಂಕ:16.04.2020

****

ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯು ಮಕ್ಕಳ ಕ್ಷೇತ್ರದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ 19 ಸಾಂಕ್ರಾಮಿಕವು ಬಡತನದ ಅಂಚಿನಲ್ಲಿರುವ ಮಕ್ಕಳು, ಹದಿಹರೆಯದ ಮಕ್ಕಳು, ಶಾಲೆಯಿಂದ ಹೊರಗುಳಿದ ಮಕ್ಕಳು, ಸಂಸ್ಥೆಯಲ್ಲಿರುವ ಮಕ್ಕಳ ಮೇಲೆ ಪರಿಣಾಮ ಬೀರಬಹುದಾಗಿದ್ದು, ಈ ಬಗ್ಗೆ ಕೆಲವು ಶಿಫಾರಸ್ಸುಗಳನ್ನು ನೀಡಿದ್ದು, ಅವುಗಳು ಸೂಕ್ತವೆನಿಸಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಸಂಬಂಧ ಜಿಲ್ಲೆಗಳಲ್ಲಿ ಅಗತ್ಯಕ್ರಮ ಕೈಗೊಳ್ಳುವಂತೆ ಕೋರಿದೆ.

ತಮ್ಮ ವಿಶ್ವಾಸಿ,
24.04.2020
ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು

# ಅನುಬಂಧ

| ಕ್ಷೇತ್ರ | ಪರಿಸ್ಥಿತಿ | ಶಿಫಾರಸ್ಸು | ಕ್ರಮಕೈಗೊಳ್ಳ ಬೇಕಾದ ಇಲಾಖೆ |
|---|---|---|---|
| ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳು | • ಸರ್ಕಾರದಆದೇಶ ಸಂ.kscps/IEC/ ಏ-19/47/2019-20. ಪಾಲನೆ ಕುರಿತು (ಕರಾಮರಸೊ/ಐಇಸಿ/ಕೆ-19/47/2019-20) | • ಈ ಆದೇಶದಲ್ಲಿರುವ ಅಂಶಗಳನ್ನು ಯಥಾವತ್ತಾಗಿ ಪಾಲಿಸುವುದನ್ನು ಖಾತ್ರಿಪಡಿಸುವುದು. ಹಾಗೂ ನಿರಂತರವಾಗಿ ಪಾಲಿಸುವುದು. | ಅಧೀಕ್ಷಕರು, ಮಕ್ಕಳ ಪಾಲನಾ ಸಂಸ್ಥೆ ಹಾಗೂ ಡಿಸಿಪಿಒ ಮೇಲ್ವಿಚಾರಣೆ ಮಾಡುವುದು |
| | • ಸಂಸ್ಥೆಯಿಂದ ಮಕ್ಕಳನ್ನು ಮನೆಗೆ ಕಳುಹಿಸಿರುವ ಆದೇಶಗಳ ಪುನರ್ ಪರಿಶೀಲನೆ | • ಮನೆಗೆ ಕಳುಹಿಸಿರುವ ಮಕ್ಕಳನ್ನು ಅನುಸರಣೆ ಮಾಡುವುದು. ಮಕ್ಕಳಿಗೆ ಮನೆಯಲ್ಲಿ ಅಗತ್ಯ ಬೆಂಬಲವಿದೆಯೇ, ಮಕ್ಕಳ ಸುರಕ್ಷತೆಯಲ್ಲಿ ತೊಂದರೆ ಇದಯೇ ಎಂಬ ಬಗ್ಗೆ ಮಕ್ಕಳೊಡನೆ ಮಾತನಾಡಿ ಖಾತ್ರಿ ಮಾಡಿಕೊಳ್ಳುವುದು. ಹಸ್ತಕ್ಷೇಪದ ಅಗತ್ಯವಿದ್ದಲ್ಲಿ ರಕ್ಷಣೆಗೆ(ಸಂಸ್ಥೆಗೆ ವಾಪಸ್ಸು ಕರೆತರಬೇಕಾದಲ್ಲಿ) ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು. | ಜಿಲ್ಲಾ ಮಕ್ಕಳ ರಕ್ಷಣಾಘಟಕ |
| | • ಮಕ್ಕಳಿಗೆ ಸಮಾಲೋಚನೆ | • ಸಂಸ್ಥೆಗಳಲ್ಲಿರುವ ಹಾಗೂ ಡಿಸಿಪಿಒ ಕಛೇರಿಯಲ್ಲಿರುವ ಸಮಾಲೋಚಕರು ಸಂಸ್ಥೆಯಲ್ಲಿನ ಮಕ್ಕಳಿಗೆ ಅಗತ್ಯ ಸಮಾಲೋಚನೆ ನೀಡುವುದನ್ನು ಖಾತ್ರಿಪಡಿಸಿಕೊಳ್ಳುವುದು. ಅಗತ್ಯ ಬಿದ್ದಲ್ಲಿ ಹೆಚ್ಚಿನ ಸಮಾಲೋಚನೆ ಆರೋಗ್ಯ ಇಲಾಖೆ ಮೂಲಕ ಒದಗಿಸುವುದು. | ಜಿಲ್ಲಾ ಮಕ್ಕಳ ರಕ್ಷಣಾಘಟಕ |
| | • ಕ್ವಾರಂಟೈನ್ ಅಥವಾ ಐಸೋಲೇಷನ್‌ನಲ್ಲಿ ಇರುವ ಪೋಷಕರ ಮಕ್ಕಳು. ಅವರ ವಸತಿ, ಈ ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕುರಿತ ಸ್ಪಷ್ಟತೆ | • ಪೋಷಕರು ಕ್ವಾರಂಟೈನ್ ಅಥವಾ ಐಸೋಲೇಷನ್‌ನಲ್ಲಿ ಇದ್ದರೆ, ಅವರ ಮಕ್ಕಳಿಗೆ ಇರಲು ವ್ಯವಸ್ಥೆ ಮಾಡುವುದು. ಉತ್ತಮ ವ್ಯವಸ್ಥೆಇರುವ ಸಿಸಿಐ ಗಳನ್ನು ಗುರುತಿಸಿ ಮಕ್ಕಳನ್ನು ಇಡಲು ವ್ಯವಸ್ಥೆ ಮಾಡಬಹುದಾಗಿದೆ. ಪರ್ಯಾಯ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳು, ಆರೋಗ್ಯ ಇಲಾಖೆ, ಸಮಾಜಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರೊಡನೆ ಚರ್ಚಿಸಿ ಕಲ್ಪಿಸುವುದು. ಈ ಮಕ್ಕಳಿಗೆ ಅಗತ್ಯವಾದ ಎಲ್ಲಾ ಸೌಕರ್ಯ ಹಾಗೂ ಆರೋಗ್ಯ ಸೇವೆ ಒದಗಿಸುವುದು. | |
| ಲಾಕ್‌ಡೌನ್ ಅವಧಿಯಲ್ಲಿ ಮಕ್ಕಳ ಮೇಲೆ ದೌರ್ಜನ್ಯ ಉಂಟಾಗುವುದು | • ಈ ಸಂಧರ್ಭದಲ್ಲಿ ಮಕ್ಕಳ ಮೇಲಿನ ದೌರ್ಜನ್ಯದ ಸಂಖ್ಯೆ ಹೆಚ್ಚಾಗುವ ಅವಕಾಶಗಳಿವೆ | • 1098 ಸಹಾಯವಾಣಿ ಬಗ್ಗೆ ವ್ಯಾಪಕ ಪ್ರಚಾರ ಮಾಡುವುದು. ಕೋವಿಡ್ 19 ರ ಸಹಾಯವಾಣಿ ಬಗ್ಗೆಯೂ ಪ್ರಚಾರ ಮಾಡುವುದು. ದೂರು ಕರೆಗಳನ್ನು ಆಲಿಸಿ ಅಗತ್ಯ ರಕ್ಷಣೆಗೆ ವ್ಯವಸ್ಥೆ ಮಾಡುವುದು. | ಮಕ್ಕಳ ಸಹಾಯ ವಾಣಿ ಹಾಗೂ ಡಿಸಿಪಿಯು. ಆರೋಗ್ಯ ಇಲಾಖೆ |